# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2016-17ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರ ಆಯವ್ಯಯ ಭಾಷಣದ ಘೋಷಣೆ- ಧನಶ್ರೀ ಯೋಜನೆ ಅನುಷ್ಠಾನ ಕುರಿತು.

**ಓದಲಾಗಿದೆ:**

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರ ಏಕ ಕಡತ ಸಂಖ್ಯೆ: ಮಅನಿ:ಹೊಯೋ/ಧನಶ್ರೀ/01/2016-17.

**ಪ್ರಸ್ತಾವನೆ:**

ಹೆಚ್.ಐ.ವಿ. ಸೋಂಕಿತ ಸಂತ್ರಸ್ಥೆಯರು ಸುಮಾರು 2,50,000 ಇರುವುದಾಗಿ ಅಂದಾಜಿಸಲಾಗಿದೆ. ಇಂತಹ ಮಹಿಳೆಯರು ಹಾಗೂ ಹೆಚ್.ಐ.ವಿ. ಬಾಧಿತ ಕುಟುಂಬಸ್ಥರು ಸಮಾಜದಲ್ಲಿ ಅನೇಕ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಅಲ್ಲದೆ, ಅವರುಗಳು ಅನುಭವಿಸುತ್ತಿರುವ ಸ್ಥಿತಿಗತಿಗಳಿಂದಾಗಿ ಸಮಾಜದಲ್ಲಿ ಮುಂದೆ ಬರಲು ಸಾಧ್ಯವಾಗದೆ ಅವಕಾಶಗಳಿಂದ ವಂಚಿತರಾಗುತ್ತಾರೆ. ಈ ಪರಿಣಾಮವಾಗಿ ಅವರು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುತ್ತಾರೆ. ಈ ರೀತಿ ಸಂಕಷ್ಟಕ್ಕೊಳಗಾದ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದು ಅಗತ್ಯವಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ 18 ರಿಂದ 60 ವರ್ಷ ವಯೋಮಿತಿಯ ಅತಿ ಸಂಕಷ್ಟಕ್ಕೊಳಗಾದ ಮತ್ತು ಬಾಧಿತ ಮಹಿಳೆಯರಿಗೆ ಹಾಗೂ ಅವರ ಕುಟುಂಬದ ಸದಸ್ಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಪ್ರೇರೇಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. 2016-17ನೇ ಸಾಲಿನ ಆಯ-ವ್ಯಯ ಘೋಷಣೆ ಮೇರೆಗೆ ಧನಶ್ರೀ ಯೋಜನೆಯಡಿ ಪ್ರತಿ ಫಲಾನುಭವಿಗೆ ರೂ.40,000/-ಗಳ ನೇರ ಸಾಲವನ್ನು ಶೇಕಡ 4ರ ಬಡ್ಡಿ ದರದಲ್ಲಿ ಒದಗಿಸಿ ರೂ.10,000/- ಗಳನ್ನು ಸಹಾಯಧನವಾಗಿ ನೀಡಲು ಒಟ್ಟು 1000 ಫಲಾನುಭವಿಗಳಿಗೆ ರೂ.500.00 ಲಕ್ಷಗಳನ್ನು ಹಾಗೂ ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಮೇಲೆ ಕ್ರಮ ಸಂಖ್ಯೆ:1ರಲ್ಲಿ ಓದಲಾದ ಏಕ ಕಡತದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 18 ಮಅನಿ 2016, ಬೆಂಗಳೂರು, ದಿನಾಂಕ: 22.06.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, 2016-17ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ "ಧನಶ್ರೀ" ಯೋಜನೆಯನ್ನು ಅನುಷ್ಠಾನಗೊಳಿಸಲು ತಾತ್ವಿಕ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಕರ್ನಾಟಕ ರಾಜ್ಯದದಲ್ಲಿ ವಾಸಿಸುತ್ತಿರುವ 18ರಿಂದ 60 ವರ್ಷ ವಯೋಮಿತಿಯ ಅತೀ ಸಂಕಷ್ಟಗೊಳಗಾದ ಮತ್ತು ಹೆಚ್.ಐ.ವಿ ಸೋಂಕಿತ ಸಂತ್ರಸ್ಥೆಯರಿಗೆ ಪ್ರತಿ ಫಲಾನುಭವಿಗೆ ರೂ.40.000/-ಗಳ ಸಾಲವಾಗಿ ಹಾಗೂ ರೂ.10.000/- ಸಹಾಯಧನ ನೀಡಲು ಹಾಗೂ ಹೆಚ್.ಐ.ವಿ ಸೋಂಕಿತ ಮಹಿಳೆಯರ ಗೌಪ್ಯತೆಗೆ ಭಂಗವನ್ನುಂಟುಮಾಡದೆ ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಮಾರ್ಗಸೂಚಿಗೊಳಪಟ್ಟಿರುತ್ತದೆ.

ಈ ಯೋಜನೆಯನ್ನು ಪೂರಕ ಅಂದಾಜು-1ರಲ್ಲಿ ಒದಗಿಸಲಾಗುವ ಅನುದಾನದ ಮಿತಿಯೊಳಗೆ ಭರಿಸುವ ಷರತ್ತಿಗೊಳಪಟ್ಟಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 121 ವೆಚ್ಚ-10/2016, ದಿನಾಂಕ:04.5.2016ರ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 43 ಐಎಂಎಂ 2016, ದಿನಾಂಕ:28.5.2016ಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

22/6/2016
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ/ ಇಆರ್‌ಎಸ್‌ಎ ಮತ್ತು ಎ & ಇ)ಅಂಚೆ ಪೆಟ್ಟಿಗೆ ಸಂಖ್ಯೆ:5398, ಕರ್ನಾಟಕ, ಬೆಂಗಳೂರು – 560 001.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಜಂಟಿ ನಿರ್ದೇಶಕರು/ಉಪನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
7. ಉಪನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ ಬೆಂಗಳೂರು
8. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
9. ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3)
11. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
13. ಶಾಖಾಧಿಕಾರಿ, ಸ್ತ್ರೀಮರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
14. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
16. ಶಾಖಾ ರಕ್ಷಾ ಕಡತ/ODGC/ಹೆಚ್ಚುವರಿ ಪ್ರತಿ.

# ಧನಶ್ರೀ ಯೋಜನೆ

(ಹೆಚ್.ಐ.ವಿ ಸೋಂಕಿತ ಮತ್ತು ಬಾಧಿತ ಕುಟುಂಬಗಳ ಮಹಿಳೆಯರಿಗೆ ಸಾಲ ಮತ್ತು ಸಹಾಯಧನ ಯೋಜನೆ)

## ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ನಿಗಮದಿಂದ ನೇರವಾಗಿ ನೀಡುವ ಸಾಲ ಮತ್ತು ಸಹಾಯಧನ ಬಿಡುಗಡೆ ಮಾಡುವ ಸಂಬಂಧಅನುಸರಿಸಬೇಕಾದಮಾರ್ಗಸೂಚಿಗಳು

### ಸಾಲ ಪಡೆಯಲುಅರ್ಹತೆ:

1. ಅರ್ಜಿದಾರಳು ರಾಷ್ಟ್ರೀಕೃತ ಬ್ಯಾಂಕ್ ಖಾತೆಯನ್ನು ಹೊಂದಿದ್ದು, ಚಾಲ್ತಿಯಲ್ಲಿರಬೇಕು.
2. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಗಳಾಗಿರಬೇಕು.
3. ಅರ್ಜಿದಾರಳು 18 ರಿಂದ 50 ವರ್ಷದೊಳಗಿರಬೇಕು.
4. ಅರ್ಜಿದಾರಳು ಯಾವುದೇ ಆರ್ಥಿಕ ಸಂಸ್ಥೆ/ಬ್ಯಾಂಕುಗಳಲ್ಲಿ ಸಾಲಗಾರರಾಗಿರಬಾರದು.
5. ಗಂಡ, ಹೆಂಡತಿ, ಎರಡು ಮಕ್ಕಳು ಹೊಂದಿರುವ ಕುಟುಂಬದಲ್ಲಿ ಒಬ್ಬ ಮಹಿಳೆ ಮಾತ್ರ ಯೋಜನೆಯ ಸೌಲಭ್ಯ ಹೊಂದಲು ಅರ್ಹರು.
6. ಅರ್ಜಿದಾರಳ ಕುಟುಂಬದಲ್ಲಿ(5.1) ಮಹಿಳೆ ಹೆಚ್.ಐ.ವಿ. ಸೋಂಕಿತಳಾಗಿದ್ದರೆ, (5.2) ಮಹಿಳೆ ಹೆಚ್.ಐ.ವಿ. ಯಿಂದಬಾಧಿತಳಾಗಿದ್ದರೆ (ಹೆಂಡತಿಅಥವಾ 18 ವರ್ಷ ಮೀರಿದ ಅವಿವಾಹಿತ ಮಗಳು) ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿರುತ್ತದೆ. ಈ ಕುರಿತಾಗಿ ಜಿಲ್ಲೆಯ ಹತ್ತಿರದ ಆರೋಗ್ಯ ಕೇಂದ್ರದಲ್ಲಿನ ಐ.ಸಿ.ಟಿ.ಸಿ. ಕೇಂದ್ರಗಳಲ್ಲಿ ವೈದ್ಯಕೀಯ ವರದಿಯನ್ನು ಪಡೆಯುವುದು.

### ಸಲ್ಲಿಸಬೇಕಾದ ದಾಖಲಾತಿಗಳು:

1. ಸಾಲ ಪಡೆಯಲು ನಿಗಮಕ್ಕೆ ಸಲ್ಲಿಸಬೇಕಾದ ಸಾಲ ಮತ್ತು ಸಹಾಯಧನದ ಅರ್ಜಿ
2. ಅರ್ಜಿದಾರಳ 4 ಭಾವಚಿತ್ರಗಳು
3. ವಿಳಾಸ ದೃಢಿಕರಣ ದಾಖಲೆಗಳು (ಮತದಾರರ ಗುರುತಿನ ಚೀಟಿ/ಆಧಾರಕಾರ್ಡು/ಪಡಿತರ ಚೀಟಿ ಯಾವುದಾದರೊಂದುದಾಖಲೆ ಸಲ್ಲಿಸುವುದು.
4. ಅರ್ಜಿದಾರಳು ಮತ್ತು ನಿಗಮದೊಂದಿಗೆ ಸಾಲದ ಕುರಿತಾಗಿ ಮಾಡಿಕೊಳ್ಳುವ ಒಪ್ಪಂದದ (ಎಂ.ಓ.ಯು) ರೂ.20 ಛಾಪಾಕಾಗದ
5. ಬ್ಯಾಂಕ್ಖಾತೆಯ ಪುಸ್ತಕದ ನಕಲು ಪ್ರತಿ ಮತ್ತು ರಾಷ್ಟ್ರೀಕೃತ ಬ್ಯಾಂಕಿನ ಹೆಸರು ಮತ್ತು ಅದರ ಐ.ಎಫ್.ಎಸ್.ಸಿ. ಕೋಡ್ದಾಖಲೆ.
6. ಕುಟುಂಬದ ಬಿ.ಪಿ.ಎಲ್. ಕಾರ್ಡ್‌ನ ನಕಲು ಪ್ರತಿ
7. ಸಾಲ ಪಡೆಯಲು ಉದ್ದೇಶಿಸಿದ್ದ ಆದಾಯೋತ್ಪನ್ನ ಚಟುವಟಿಕೆಯ ಯೋಜನಾ ವರದಿ.
8. ಬೇರೆಯಾವುದೇ ಆರ್ಥಿಕ ಸಂಸ್ಥೆ ಅಥವಾ ಬ್ಯಾಂಕ್‌ಗಳಿಂದ ಸಾಲ ಪಡೆದಿಲ್ಲ ಎಂಬ ಬಗ್ಗೆ ದೃಢೀಕರಣವನ್ನು ಅರ್ಜಿದಾರಳು ಖಾತೆ ಹೊಂದಿರುವ ರಾಷ್ಟ್ರೀಕೃತಬ್ಯಾಂಕಿನಿಂದ ಪಡೆಯುವುದು.
9. ಐ.ಸಿ.ಟಿ.ಸಿ./ಪಿ.ಪಿ.ಟಿ.ಸಿ.ಟಿ ಕೇಂದ್ರಗಳಲ್ಲಿ ಪಡೆದ ಹೆಚ್.ಐ.ವಿ. ಸೋಂಕು ಇರುವ ಸಂಬಂಧ ವೈದ್ಯಕೀಯ ವರದಿಯ ನಕಲು ಪ್ರತಿ

ಈ ಮೊತ್ತದ ಸಾಲಕ್ಕೆ ಯಾವುದೇ ವೈಯಕ್ತಿಕ ಜಾಮೀನು ಪಡೆಯುವ ಅಗತ್ಯವಿರುವುದಿಲ್ಲ. ಸಾಲದ ಭದ್ರತೆಗಾಗಿ ಹೆಚ್ಚುವರಿಯಾಗಿ ಯಾವುದೇ ಆಸ್ತಿಯನ್ನು ಪಡೆಯುವ ಅಗತ್ಯವಿರುವುದಿಲ್ಲ.

## ಸಾಲ ಮಂಜೂರಾತಿ ವಿಧಾನ:

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ನಿಗದಿಪಡಿಸಿರುವ ಜಿಲ್ಲಾವಾರು ಗುರಿಯನ್ವಯ ತಾಲ್ಲೂಕು ಮತ್ತು ವಿಧಾನ ಸಭಾಕ್ಷೇತ್ರವಾರು ಕ್ರಿಯಾಯೋಜನೆಯನ್ನು ಉಪ ನಿರ್ದೇಶಕರು/ಜಿಲ್ಲಾ ವ್ಯವಸ್ಥಾಪಕರು, ಮಹಿಳಾ ಅಭಿವೃದ್ಧಿ ನಿಗಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮಾಡಿಕೊಳ್ಳುವುದು ಹಾಗೂ ಪ್ರಧಾನ ಕಛೇರಿಗೆ ಮಾಹಿತಿ ನೀಡುವುದು. ಅರ್ಜಿದಾರರಿಂದ ಅರ್ಜಿಗಳನ್ನು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ ಅಹ್ವಾನಿಸುವುದು. ಅರ್ಹ ಅರ್ಜಿದಾರಳು ನಿಗದಿತ ಸಾಲದ ಅರ್ಜಿ ಸಲ್ಲಿಸಲು1 ತಿಂಗಳ ಕಾಲಾವಕಾಶ ನೀಡಲಾಗುವುದು. ಅರ್ಜಿದಾರಳು ನಿಗದಿ ಪಡಿಸಿರುವ ಅರ್ಜಿಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಇವರಿಗೆ ಸಲ್ಲಿಸುವುದು.

ಸ್ವೀಕೃತವಾದ ಅರ್ಜಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪರಿಶೀಲಿಸಿ ತಮ್ಮ ತಾಲ್ಲೂಕಿಗೆ ನಿಗಧಿಪಡಿಸಲಾಗಿರುವ ಗುರಿಯನ್ವಯ ಅರ್ಜಿದಾರರನ್ನು ಶಿಫಾರಸ್ಸು ಮಾಡಿ ಜಿಲ್ಲಾಕಛೇರಿಗೆ ಸಲ್ಲಿಸುವುದು. ಹೀಗೆ ಸ್ವೀಕೃತವಾದ ಅಭಿವೃದ್ಧಿ ನಿರೀಕ್ಷಕರು ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ ಪೂರ್ಣ ವಿವರ ಹಾಗೂ ದಾಖಲಾತಿಗಳೊಂದಿಗೆ ಪರಿಶೀಲನೆ ನಡೆಸುವುದು. ಜಿಲ್ಲಾ ಸಮಿತಿಯಲ್ಲಿಡಲು ಅರ್ಜಿದಾರಳು ಪಡೆದ ಸಾಲದಿಂದ ಕೈಗೊಳ್ಳಬಹುದಾದ ಆದಾಯೋತ್ಪನ್ನ ಚಟುವಟಿಕೆ, ಕೈಗೊಳ್ಳಬಹುದಾದ ಚಟುವಟಿಕೆಯ ಆರ್ಥಿಕತೆ, ಉದ್ದಿಮೆಯ ಯಶಸ್ಸಿನ ಕುರಿತು ಪರಿಗಣನೆ, ಲಾಭಾದಾಯಕ ಉದ್ದಿಮೆ, ಕುಟುಂಬದ ಆರ್ಥಿಕ ಪರಿಸ್ಥಿತಿ ವಿವರ ಇವೇ ಮುಂತಾದ ಮಾನದಂಡಗಳ ಹಿನ್ನಲೆಯಲ್ಲಿ ಎಚ್ಚರಿಕೆಯಿಂದ ಪರಿಶೀಲಿಸಿ, ಪ್ರಸ್ತಾವನೆಗಳನ್ನು ಈ ಕೆಳಕಂಡ ನಮೂನೆಯಲ್ಲಿ ಸಲ್ಲಿಸುವುದು. ಆಯ್ಕೆಯಾದ ಫಲಾನುಭವಿಗಳ ಪ್ರಸ್ತಾವನೆಗಳನ್ನು ಜಿಲ್ಲಾ ಕಛೇರಿಗಳಲ್ಲಿ ಸಂಗ್ರಹಿಸುವುದು. ಕೇಂದ್ರಕಛೇರಿಗೆ ಅಗತ್ಯ ಕಂಡು ಬಂದಲ್ಲಿ ಮಾತ್ರ ಪ್ರಸ್ತುತಪಡಿಸುವುದು.

| ಕ್ರ.ಸಂ | ಅರ್ಹ ಫಲಾನುಭವಿಯ ಹೆಸರು ಮತ್ತು ವಿಳಾಸ | ವಯಸ್ಸು | ಜಾತಿ (ಪ.ಜಾ/ ಪ.ಪಂ/ ಇತರೆ) | ಫಲಾನುಭವಿಯ ವರ್ಗೀಕರಣ (ಟಿಕ್ ಹಾಕುವುದು) | | | ಬ್ಯಾಂಕ್ ಖಾತೆ ಸಂಖ್ಯೆ | ರಾಷ್ಟ್ರೀಕೃತ ಬ್ಯಾಂಕಿನ ಹೆಸರು ಮತ್ತು ಶಾಖೆಯ ಹೆಸರು | IFSC ಸಂಖ್ಯೆ | ಕೈಗೊಳ್ಳುವ ಆದಾಯೋತ್ಪನ್ನಚಟುವಟಿಕೆ | ಷರಾ |
|---|---|---|---|---|---|---|---|---|---|---|---|
| | | | | ಸೋಂಕಿತ | ಬಾಧಿತ | | | | | | |
| | | | | | ಹೆಂಡತಿ | ಮಗಳು | | | | | |

ಪ್ರಸ್ತಾವನೆಗಳನ್ನು ಈ ಕೆಳಕಂಡ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ಮಂಡಿಸಿ. ಅಂತಿಮವಾಗಿ ತಮ್ಮ ಜಿಲ್ಲೆಗೆ ನಿಗದಿಪಡಿಸಲಾಗಿರುವ ಗುರಿಯನ್ವಯ ಆಯ್ಕೆಯಾದ ಪ್ರಸ್ತಾವನೆಗಳ ಪಟ್ಟಿಯನ್ನು ಮಾತ್ರ ಉಪ ನಿರ್ದೇಶಕರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರ ತಮ್ಮ ಸೂಕ್ತ ಶಿಫಾರಸ್ಸಿನೊಂದಿಗೆ ನಿಗಮಕ್ಕೆ ಸಲ್ಲಿಸುವುದು.

**ಜಿಲ್ಲಾ ಮಟ್ಟದಆಯ್ಕೆ ಸಮಿತಿಯನ್ನು ಈ ಕೆಳಗಿನಂತೆ ರಚಿಸಿದೆ**

| ಕ್ರ.ಸಂ | ಸಮಿತಿಯಅಧ್ಯಕ್ಷರು/ಸದಸ್ಯರು | ಪದನಾಮ |
|---|---|---|
| 1 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಅಧ್ಯಕ್ಷರು |
| 2 | ಜಿಲ್ಲಾ ನಿರೂಪಣಾ ಅಧಿಕಾರಿಗಳು | ಸದಸ್ಯರು |
| 3 | ಜಿಲ್ಲಾಆಸ್ಪತ್ರೆಯಎ.ಆರ್.ಟಿ ವಿಭಾಗದ ಮುಖ್ಯಸ್ಥರು | ಸದಸ್ಯರು |
| 4 | ಜಿಲ್ಲಾಕೈಗಾರಿಕಾ ಸಂಸ್ಥೆಯ ಪ್ರತಿನಿಧಿ | ಸದಸ್ಯರು |
| 5 | ಜಿಲ್ಲಾಎಲ್.ಡಿ.ಎಂ. ವ್ಯವಸ್ಥಾಪಕರು | ಸದಸ್ಯರು |
| 6 | ಅಭಿವೃದ್ಧಿ ನಿರೀಕ್ಷಕರು | ಸದಸ್ಯ ಕಾರ್ಯದರ್ಶಿಗಳು |

ಉಪನಿರ್ದೇಶಕರು/ಜಿಲ್ಲಾ ವ್ಯವಸ್ಥಾಪಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಶಿಫಾರಸ್ಸು ಮಾಡಿ ನಿಗಮಕ್ಕೆ ಸಲ್ಲಿಸಿದ ಪಟ್ಟಿಯಲ್ಲಿನ ಅರ್ಹ ಫಲಾನುಭವಿಗೆ ನಿಗಮದಿಂದ ಮಂಜೂರಾತಿ ಆದೇಶ ನೀಡಿ, ಆಯ್ಕೆಯಾದ ಫಲಾನುಭವಿಗೆ ಸಾಲವನ್ನು ನೇರವಾಗಿ ಆನ್‌ಲೈನ್ ಮುಖಾಂತರ ಬಿಡುಗಡೆ ಮಾಡಲಾಗುವುದು.

**ವಿವಿಧ ಹಂತದಲ್ಲಿ ಜವಾಬ್ದಾರಿಗಳು:**

1. **ಫಲಾನುಭವಿಯ ಜವಾಬ್ದಾರಿಗಳು:**

1.1. ಧನಶ್ರೀ ಯೋಜನೆಯಡಿ ಸಾಲ ಪಡೆದುಕೊಳ್ಳಬಯಸುವ ಫಲಾನುಭವಿಯು ಕೈಗೊಳ್ಳಬಹುದಾದ ಆದಾಯೋತ್ಪನ್ನ ಚಟುವಟಿಕೆಯ ಕುರಿತು ಯೋಜನಾ ವರದಿಯನ್ನು ತಯಾರಿಸುವುದು.

1.2. ಸಾಲದ ಅರ್ಜಿ ಸಲ್ಲಿಸಲು ಅಗತ್ಯವಿರುವ ಎಲ್ಲಾ ಪೂರಕ ದಾಖಲೆಗಳನ್ನು 1 ತಿಂಗಳೊಳಗಾಗಿ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು.

1.3. ರೂ.20ರ ಛಾಪಾಕಾಗದದಲ್ಲಿ ಸಾಲ ಪಡೆಯುವ ಕುರಿತು, ನಿಗದಿತ ಅವಧಿಯಲ್ಲಿ ಮರುಪಾವತಿಸುವ ಕುರಿತು ಹಾಗೂ ಮರುಪಾವತಿ ಮಾಡದಿದ್ದಲ್ಲಿ ಕಾನೂನು ಕ್ರಮಕ್ಕೆ ಬದ್ಧರಾಗಿರುವ ಕುರಿತು ಒಪ್ಪಂಧ ಮಾಡಿಕೊಳ್ಳುವುದು.

1.4. ಸಾಲ ಮಂಜೂರಾಗಿ ಬಂದ ಮೇಲೆ ನೇರವಾಗಿ ನಿಗಮದಿಂದ ಫಲಾನುಭವಿಯ ಬ್ಯಾಂಕ್‌ಖಾತೆಗೆ ಸಾಲ ಮತ್ತು ಸಹಾಯಧನದ ಮೊತ್ತವು ಜಮೆಯಾಗಿದ್ದರ ಬಗ್ಗೆ ಒಂದು ವಾರದೊಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ವರದಿ ಸಲ್ಲಿಸುವುದು.

1.5. ಮಂಜೂರಾದ ಸಾಲದಿಂದ ಯೋಜನಾ ವರದಿಯಂತೆ 1 ತಿಂಗಳೊಳಗಾಗಿ ಆದಾಯೋತ್ಪನ್ನ ಚಟುವಟಿಕೆ ಕೈಗೊಂಡಿದ್ದರ ವರದಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು.

1.6. ಸಾಲ ಮತ್ತು ಸಹಾಯಧನ ಮಂಜೂರಾದ 3 ತಿಂಗಳು ನಂತರ 4ನೇ ತಿಂಗಳಿಂದ ಮುಂದಿನ 36ಮಾಸಿಕ ಕಂತುಗಳಲ್ಲಿ ವಾರ್ಷಿಕ ಶೇ.4 ರ ಬಡ್ಡಿದರದಲ್ಲಿ ಪ್ರತಿ ತಿಂಗಳು ಅಸಲು ರೂ.1,111/- ಮತ್ತು ಬಡ್ಡಿ ರೂ.44/- ಒಟ್ಟು ರೂ.1156/-ಗಳನ್ನು ಅಭಿವೃದ್ಧಿ ನಿರೀಕ್ಷಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆಪ್ರತಿ ಮಾಹೆ 10ನೇ ತಾರೀಖಿನೊಳಗೆ ಪಾವತಿಸಿ ರಸೀದಿ ಪಡೆಯುವುದು.

1.7. ಮರುಪಾವತಿಯು ನಿಗಧಿತ ಅವಧಿಯಲ್ಲಿ ಆಗದಿದ್ದಲ್ಲಿ ಪ್ರತಿ 6 ತಿಂಗಳಿಗೆ ಶೇ.1 ರಂತೆ ವಿಳಂಬ ಶುಲ್ಕವನ್ನು ಪಾವತಿಸಲು ಫಲಾನುಭವಿಯು ಬದ್ಧರಾಗಿರುವುದು. ತಪ್ಪಿದಲ್ಲಿ ವಿರುದ್ಧ ಕಾನೂನಿನ ರೀತಿಕ್ರಮಕ್ಕೆ ಒಳಪಡಬೇಕಾಗುತ್ತದೆ.

1.8. ಫಲಾನುಭವಿಯು ಪಡೆದ ಸಾಲ ಮತ್ತು ಸಹಾಯಧನದಿಂದ ಆದಾಯೋತ್ಪನ್ನ ಚಟುವಟಿಕೆ ಕೈಗೊಂಡ ಸ್ಥಳದಲ್ಲಿ **"ಪ್ರಾಯೋಜಕತ್ವ-ಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು"** ಎಂದು ದಪ್ಪ ಅಕ್ಷರಗಳಲ್ಲಿ ಕಡ್ಡಾಯವಾಗಿ ಬರೆಸತಕ್ಕದ್ದು.

## 2. ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಜವಾಬ್ದಾರಿಗಳು

2.1 ಅರ್ಜಿದಾರರಿಂದ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳನ್ನು ಮಾರ್ಗಸೂಚಿಯಂತೆ ಎಚ್ಚರಿಕೆಯಿಂದ 15 ದಿನಗಳೊಳಗೆ ಪರಿಶೀಲಿಸಿ ಸಂಪೂರ್ಣ ದಾಖಲೆಗಳನ್ನು ಸಲ್ಲಿಸಿದ ಪ್ರಸ್ತಾವನೆಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ಉಪ ನಿರ್ದೇಶಕರು/ ಜಿಲ್ಲಾ ವ್ಯಸ್ಥಾಪಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸಲ್ಲಿಸುವುದು.

2.2 ಜಿಲ್ಲಾ ಮಟ್ಟದಆಯ್ಕೆ ಸಮಿತಿಯಿಂದಆಯ್ಕೆಯಾಗಿ ನಿಗಮದಿಂದ ಸಾಲ ಮತ್ತು ಸಹಾಯಧನಮಂಜೂರಾಗಿ ಬಂದ ಮೇಲೆ 15 ದಿನಗಳೊಗಾಗಿ ಫಲಾನುಭವಿಯ ಬ್ಯಾಂಕ್‌ಖಾತೆಗೆಸಾಲ ಮತ್ತು ಸಹಾಯಧನದ ಮೊತ್ತ ಜಮೆಯಾಗಿರುವ ಬಗ್ಗೆ ಜಿಲ್ಲಾಕಛೇರಿಗೆ ದೃಢೀಕರಣವನ್ನು ಸಲ್ಲಿಸುವುದು.

2.3 ಫಲಾನುಭವಿಗಳು 1 ತಿಂಗಳೊಳಗೆ ಆದಾಯೋತ್ಪನ್ನ ಚಟುವಟಿಕೆಯನ್ನು ಕೈಗೊಳ್ಳಲು ಅಗತ್ಯ ಸಹಕಾರ ಮತ್ತು ಮಾರ್ಗದರ್ಶನ ನೀಡುವುದು.

2.4 ಫಲಾನುಭವಿಯು ಆದಾಯೋತ್ಪನ್ನ ಚಟುವಟಿಕೆ ಕೈಗೊಂಡ 4 ನೇ ತಿಂಗಳಿಂದ ಸಾಲ ಮರುಪಾವತಿ ಮಾಡುತ್ತಿರುವ ಬಗ್ಗೆ ಲಕ್ಷ್ಯವಹಿಸಿ, ಸಾಲ ಮರುಪಾವತಿಗೆ ಪ್ರೇರೇಪಿಸುವುದು. ಸಾಲ ಮರುಪಾವತಿಯಾಗದಿದ್ದಲ್ಲಿ ಫಲಾನುಭವಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು.

## 3. ಜಿಲ್ಲಾ ಮಟ್ಟದಆಯ್ಕೆ ಸಮಿತಿ/ ಜಿಲ್ಲಾ ಅನುಷ್ಠಾನಾಧಿಕಾರಿಗಳ ಜವಾಬ್ದಾರಿಗಳು

3.1 ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಶಿಫಾರಸ್ಸಿನೊಂದಿಗೆ ಬಂದ ಪ್ರಸ್ತಾವನೆಗಳನ್ನು ಜಿಲ್ಲಾ ಅಭಿವೃದ್ಧಿ ನಿರೀಕ್ಷಕರು ಪರಿಶೀಲಿಸಿ, ಎಲ್ಲಾ ದಾಖಲಾತಿಗಳೊಂದಿಗೆ ಸಂಪೂರ್ಣವಾಗಿರುವ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ಸ್ವೀಕರಿಸಿದ 15 ದಿವಸಗಳೊಳಗೆ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯನ್ನು ಕರೆದು ಸಭೆಯಲ್ಲಿ ಮಂಡಿಸುವುದು.

3.2 ಸಮಿತಿಯು ಎಲ್ಲಾ ತಾಲ್ಲೂಕು ಮತ್ತು ವಿಧಾನಸಭಾ ಕ್ಷೇತ್ರಗಳಗುರಿ ಪ್ರಕಾರ ಪ್ರಾತಿನಿಧ್ಯ ನೀಡಿಫಲಾನುಭವಿಗಳನ್ನು ಅರ್ಹತಾ ಮಾನದಂಡಗಳ ಅನುಸಾರವಾಗಿ ಆಯ್ಕೆ ಮಾಡುವುದು.

3.3 ಮೇಲಿನಂತೆ ಆಯ್ಕೆಯಾದ ಪ್ರಸ್ತಾವನೆಗಳ ಆಯ್ಕೆಪಟ್ಟಿಯನ್ನು ಉಪ ನಿರ್ದೇಶಕರು/ಜಿಲ್ಲಾ ವ್ಯವಸ್ಥಾಪಕರು ಆಯ್ಕೆ ಸಮಿತಿಯ ನಡವಳಿಗಳೊಂದಿಗೆ ಸಭೆ ನಡೆದ ಒಂದು ವಾರದೊಳಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸುವುದು.

3.4 ಫಲಾನುಭವಿಗಳಿಗೆ ಸಾಲ ಮಂಜೂರಾಗಿ ಬಂದನಂತರ ಅವರು ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಂಡ ಬಗ್ಗೆ ಭೇಟಿ ನೀಡಿ ಅವುಗಳ ಪ್ರಗತಿಯ ಬಗ್ಗೆ ಪರಿಶೀಲಿಸಿ ಮಾರ್ಗದರ್ಶನ ಹಾಗೂ ಬೆಂಬಲ ನೀಡಿಪರಿಶೀಲಿಸುವುದು.

3.5 ಜಿಲ್ಲಾ ಕಛೇರಿಯಲ್ಲಿ ಈ ಸಾಲ ಪಡೆದ ಫಲಾನುಭವಿಗಳ ಪ್ರಸ್ತಾವನೆಗಳ ದಾಖಲಾತಿಗಳನ್ನು ರಜಿಸ್ಟರ್‌ನಲ್ಲಿ ಕ್ರಮವಾಗಿ ನೊಂದಾಯಿಸಿಕೊಂಡು ಅರ್ಜಿಯೊಂದಿಗೆ ಸೂಕ್ತ ಭದ್ರತೆಯಲ್ಲಿಡುವುದು. ಭದ್ರತೆಯಲ್ಲಿಟ್ಟಿರುವ ಬಗ್ಗೆ ಉಪ ನಿರ್ದೇಶಕರು/ಜಿಲ್ಲಾ ವ್ಯವಸ್ಥಾಪಕರು ಖಚಿತಪಡಿಸಿಕೊಳ್ಳುವುದು. ನಿಗಮದ ಕೇಂದ್ರಕಛೇರಿಯವರು ಸಾಲ ಮಂಜೂರಾದ ಪ್ರಸ್ತಾವನೆಗಳನ್ನು ಕೇಳಿದಾಗ ನಿಗಮಕ್ಕೆ ಪರಿಶೀಲನೆಗಾಗಿ ಸಲ್ಲಿಸುವುದು.

3.6 ಜಿಲ್ಲಾ ಅಭಿವೃದ್ಧಿ ನಿರೀಕ್ಷಕರು ಫಲಾನುಭವಿಗಳಿಗೆ ನೀಡಿದ ಸಾಲದ ಮೊತ್ತ, ಮರುಪಾವತಿಯ ವಿವರ, ಬ್ಯಾಂಕ್ ಪಾಸ್ ಪುಸ್ತಕದ ವಿವರಗಳನ್ನು ತಮ್ಮಕಛೇರಿಯ ದಾಖಲೆಗಳಲ್ಲಿ ನಮೂದಿಸಿ ಮರುಪಾವತಿಯ ಬಗೆ

ಖಾತರಿಪಡಿಸಿ ಫಲಾನುಭವಿಗಳ ಆರ್ಥಿಕಪ್ರಗತಿಯ ಬಗ್ಗೆ ಪ್ರತಿ ತಿಂಗಳು ನಿಗಮಕ್ಕೆ ವರದಿಯನ್ನು ಸಲ್ಲಿಸುವುದು. ಮತ್ತು ಉಪಯುಕ್ತತಾ ಪ್ರಮಾಣ ಪತ್ರಗಳನ್ನು ನಿಗಮಕ್ಕೆ ಸಲ್ಲಿಸುವುದು.

3.7 ಫಲಾನುಭವಿಗಳಿಂದ ಮರುಪಾವತಿಯಾದ ಸಾಲದ ಮೊತ್ತವನ್ನು ಪ್ರತಿ ತಿಂಗಳು 15ನೇ ತಾರೀಖಿನೊಳಗೆ ನಿಗಮದ ಬ್ಯಾಂಕ್‌ಖಾತೆಗೆ ಜಮೆ ಮಾಡುವುದು ಮತ್ತು ವರದಿ ಸಲ್ಲಿಸುವುದು.

3.8 ಸಾಲ ಸಂಪೂರ್ಣವಾಗಿ ಮರುಪಾವತಿ ಮಾಡಿದ ಫಲಾನುಭವಿಗಳಿಗೆ ಸಾಲ ತಿರುವಳಿ ಪತ್ರವನ್ನು ಮೂರು ತಿಂಗಳೊಳಗೆ ನಿಗಮದಿಂದ ಖಾತರಿಪಡಿಸಿಕೊಂಡು ನೀಡುವುದು.

**4. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಜವಾಬ್ದಾರಿಗಳು**

4.1 ಯೋಜನೆಯ ಅನುಷ್ಠಾನ ಮತ್ತು ಮುಂದುವರಿಕೆಯ ಕುರಿತು ಸರ್ಕಾರದಿಂದ ಆದೇಶ ಮತ್ತು ನಿಗಧಿತ ಆಯವ್ಯಯ ಪಡೆಯುವುದು.

4.2 ಸರ್ಕಾರದಿಂದ ಹಂಚಿಕೆಯಾದ ಅನುದಾನದ ಆಧಾರದ ಮೇಲೆ ಜಿಲ್ಲೆಗಳಿಗೆ ಪ್ರತಿ ವರ್ಷದ ಆರಂಭದ ತಿಂಗಳಲ್ಲಿ ಗುರಿ ನಿಗದಿ ಪಡಿಸಿ, ಕ್ರಿಯಾಯೋಜನೆಯನ್ನು ನೀಡುವುದು.

4.3 ಜಿಲ್ಲಾ ಮಟ್ಟದಆಯ್ಕೆ ಸಮಿತಿಯಿಂದ ಸ್ವೀಕರಿಸಿದ ಪ್ರಸ್ತಾವನೆಗಳ ಪಟ್ಟಿಗೆಆದ್ಯತೆಯ ಮೇರೆಗೆ ಸ್ವೀಕರಿಸಿದ 1ತಿಂಗಳೊಳಗಾಗಿ ಮಂಜೂರಾತಿಆದೇಶ ನೀಡುವುದು. ಅನುದಾನ ಲಭ್ಯತೆಗೆ ಅನುಸಾರವಾಗಿ ಆದಷ್ಟು ಶೀಘ್ರದಲ್ಲಿ ಮಂಜೂರಾತಿ ನೀಡಿದ ಜಿಲ್ಲೆಗಳ ಫಲಾನುಭವಿಗಳ ಬ್ಯಾಂಕ್‌ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಹಣ ಸಂದಾಯ ಮಾಡುವುದು.

4.4 ಆದಾಯೋತ್ಪನ್ನ ಚಟುವಟಿಕೆಗಳ ಬಗ್ಗೆ, ಸಾಲ ಮರುಪಾವತಿ ಬಗ್ಗೆ ಜಿಲ್ಲೆಗಳಿಂದ ಪ್ರತಿ ತ್ರೈಮಾಸಿಕದಲ್ಲಿ ವರದಿಗಳನ್ನು ಪಡೆದು ಕ್ರೋಢಿಕರಿಸಿ, ರಾಜ್ಯಮಟ್ಟದಲ್ಲಿ ನಿರ್ವಹಿಸುವುದು. ನಿಗಮದ ಅಧ್ಯಕ್ಷರು/ಅಧಿಕಾರಿಗಳು ಜಿಲ್ಲೆಗಳಿಗೆ ಭೇಟಿ ನೀಡಿ ಪರಿಶೀಲಿಸುವುದು.

22/6/2016
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.